**ಓ ಎಸ್ ನಂಃ 790-14**
**ಪಿ ಡಬ್ಲ್ಯೂ ಃ 2**

**ದಿಃ 07-02-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 7 ನೇ ಪ್ರತಿವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ**

9. ಈ ದಾವೆಯನ್ನು ಹೂಡಲು ವಾದ ಪತ್ರಕ್ಕೆ ಮಾಹಿತಿಯನ್ನು 1 ನೇ ಮತ್ತು 2 ನೇ ವಾದಿಗಳು, ಶಿರಾಜ್ ಉನ್ನಿಸಾ, ಅಲಿಮಾ ಬಾನು ಕೊಟ್ಟಿರುತ್ತಾರೆ. ಅಬ್ದುಲ್ ಕಲೀಂ ರವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು 3 ಜನ ಗಂಡು ಮಕ್ಕಳು ಇರುತ್ತಾರೆ, ಅವರ ಹೆಸರು ಅಬ್ದುಲ್ ಲತೀಫ್, ಕೆ. ಶಫೀಉಲ್ಲಾ, ಮಹಮ್ಮದ್ ಇಲಿಯಾಸ್, ಶಂಸುಉನ್ನಿಸಾ, ಶಿರಾಜ್ ಉನ್ನಿಸಾ, ಹಲಿಮಾ ಬಾನು, ಸೈದಾ ಬಾನು ಆಗಿರುತ್ತಾರೆ. ಅಬ್ದುಲ್ ಕಲೀಂರವರಿಗೆ ಸಲೀಂ ಉನ್ನಿಸಾ ಎಂಬ ಮಗಳು ಇದ್ದರು ಎಂದರೆ ನಿಜ, ಸಾಕ್ಷಿ ಮುಂದುವರೆದು ಅವರು ತೀರಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸಲೀಂ ಉನ್ನಿಸಾರವರ ಗಂಡ ತೀರಿಕೊಂಡಿದ್ದು ಅವರಿಗೆ ಮಕ್ಕಳು ಇರುತ್ತಾರೆ. ಸಲೀಂಉನ್ನಿಸಾರವರಿಗೆ 6 ಜನ ಹೆಣ್ಣು ಮಕ್ಕಳು ಇರುತ್ತಾರೆ, ಅವರು ನಸ್ರೀನ್ ತಾಜ್, ಶಮೀಮ್, ಶಕೀಲಾ, ಗುಲಾಬ್, ಫಿರ್ದೋಸ್ ಮತ್ತು ತಾಜ್ ಇದ್ದು ಉಳಿದ ಇಬ್ಬರು ಮಕ್ಕಳ ಹೆಸರು ಗೊತ್ತಾತ್ತಿಲ್ಲ. ಅಬ್ದುಲ್ ಕರೀಂರವರು 2004 ರಲ್ಲಿ ತೀರಿಕೊಂಡಿರುತ್ತಾರೆ. ಈ ದಾವೆಯಲ್ಲಿ ಸಲೀಂ ಉನ್ನಿಸಾ ರವರ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ದಾವಾ ಆಸ್ತಿಗಳು ನಮ್ಮ ಮುಸ್ಲಿಂ ಕಾನೂನಿನ ಪ್ರಕಾರ ಅಬ್ದುಲ್ ಕರೀಂ ರವರ ಮಾಲೀಕತ್ವಕ್ಕೆ ಒಳಪಟ್ಟ ಆಸ್ತಿಗಳು ಎಂದರೆ ನಿಜ, ಸಾಕ್ಷಿ ಮುಂದುವರೆದು ದಾವಾ ಆಸ್ತಿಗಳು ಅವರ ಹೆಂಡತಿ ಫಾತಿಮಾ ಬೀ ರವರ ಆಸ್ತಿಗಳು ಎಂದು ಹೇಳುತ್ತಾರೆ. ದಾವಾ ಆಸ್ತಿಗಳು ಫಾತಿಮಾ ಬೀ ರವರ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಈಗ ಈ ಬಗ್ಗೆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಫಾತಿಮಾ ಬೀ ರವರು 1995 ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳು ಫಾತಿಮಾ ಬೀ ರವರ ಆಸ್ತಿಗಳು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.